

ಕ್ರಿಕೆಟ್ ಬೆಳವಣಿಗೆಯ ವೇಗವಿದೆ. ಕರುಣ್ ಕೂಡ ಈ ಸ್ಥಿತಿಯಿಂದ ಹೊರತಾಗಿರಲಿಲ್ಲ.

ದೇಶಿ ಟೂರ್ನಿಗಳಲ್ಲಿ ಕರ್ನಾಟಕ ತಂಡವನ್ನು ತೊರೆದು ಅವಕಾಶ ಹುಡುಕಿಕೊಂಡು ವಿದರ್ಭ ತಂಡ ಸೇರಿಕೊಂಡರು.

ಈ ಎಲ್ಲ ಕಾರಣಗಳಿಂದಾಗಿ ಕರುಣ್ ನಾಯರ್‌ಗೆ ರಾಷ್ಟ್ರೀಯ ತಂಡದ ಬಾಗಿಲು ಪೂರ್ಣವಾಗಿ ಮುಚ್ಚಿಯೇ ಹೋಯಿತು ಅಂದುಕೊಂಡವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಆದರೆ ಕರುಣ್ ಭಾರತ ತಂಡದಲ್ಲಿ ಮರಳಿ ಅವಕಾಶ ಗಿಟ್ಟಿಸಲು ನಿರಂತರವಾಗಿ ನಡೆಸಿದ್ದ ಪ್ರಯತ್ನಕ್ಕೆ ಇಂಗ್ಲೆಂಡ್ ವಿರುದ್ಧದ ಸರಣಿಗೆ ಫಲ ಲಭಿಸಿತು. ಇದೇ ವರ್ಷ ಮೇನಲ್ಲಿ ಇಂಗ್ಲೆಂಡ್ ಲಯನ್ಸ್ ವಿರುದ್ಧದ ಭಾರತ 'ಎ' ತಂಡದ ಪಂದ್ಯದಲ್ಲಿ ಕರುಣ್ ದ್ವಿಶತಕ ಹೊಡೆದರು. ಅದಕ್ಕೂ ಮೊದಲು (2023) ಕರುಣ್ ದೇಶಿ ಟೂರ್ನಿಗಳಲ್ಲಿ ಆಡಲು ಕರ್ನಾಟಕ ತಂಡ ತೊರೆದು ವಿದರ್ಭ ಸೇರಿದಾಗ ವಿದರ್ಭ ತಂಡ ಅದೇ ವರ್ಷ ರನ್ನರ್ಸ್ ಅಪ್ ಸ್ಥಾನ ಪಡೆದುಕೊಂಡಿತು. ಮರುವರ್ಷವೇ ಕರುಣ್ ನಾಯಕತ್ವದಲ್ಲಿಯೇ ವಿದರ್ಭ ರಣಜಿ ಚಾಂಪಿಯನ್ ಪಟ್ಟ ಅಲಂಕರಿಸಿಕೊಂಡಿತು.

ಈ ಎಲ್ಲ ಅವಕಾಶಗಳು ಟೆಸ್ಟ್‌ನಲ್ಲಿನ ಎರಡನೇ ಇನಿಂಗ್ಸ್‌ನಂತೆಯೇ ಕರುಣ್ ಪಾಲಿಗೆ ಮತ್ತೊಮ್ಮೆ ಲಭಿಸಿವೆ. ಇದಕ್ಕಾಗಿ ಅವರು ಹಗಲಿರುಳು ಲೆಕ್ಕಿಸದೇ ಅಭ್ಯಾಸ ಮಾಡಿದ್ದಾರೆ. ಮೊದಲಿನಂತೆಯೇ ಕವರ್ ಡ್ರೈವ್‌ಗಳು, ಕಟ್ ಶಾಟ್‌ಗಳು ಅಭ್ಯಾಸ ಮಾಡಿದ್ದಾರೆ. ಕರ್ನಾಟಕ ತಂಡದಿಂದ ಹೊರಗುಳಿದ ನಂತರ ಶಾಂತವಾಗಿಯೇ ದೃಢಚಿತ್ತದಿಂದ ಬದಲಾದರು. ಆಟದ ಶೈಲಿ ಬದಲಿಸಿಕೊಂಡು 2023 ಮತ್ತು 2024ರಲ್ಲಿ ಇಂಗ್ಲೆಂಡ್‌ನಲ್ಲಿ ಸ್ಥಳೀಯ ಕ್ಲಬ್‌ಗಳು, ಬಳಿಕ ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ನಾರ್ಥಾಂಪ್ಟನ್ ಶೈರ್‌ನೊಂದಿಗೆ ಆಡಿ ಹೊಸ ಕೌಶಲ ಕಲಿತುಕೊಂಡರು. ಕಳೆದ ವರ್ಷದ ವಿಜಯ್ ಹಜಾರೆ ಟೂರ್ನಿಯಲ್ಲಿ ಒಟ್ಟು 779 ರನ್ ಗಳಿಸುವ ಮೂಲಕ ಆ ವರ್ಷ ಟೂರ್ನಿಯಲ್ಲಿ ಒಟ್ಟು ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದರು.

ಹೀಗೆ ದೇಶಿ ಟೂರ್ನಿಗಳಲ್ಲಿ ತೋರಿದ ಪ್ರದರ್ಶನದಿಂದಲೇ ಮತ್ತೆ ಅವರಿಗೆ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಲಭಿಸಿದ್ದು, ಒಬ್ಬ ಕ್ರಿಕೆಟಿಗ ಮರಳಿ ಅರಳಲು ದೇಶಿ ಟೂರ್ನಿಗಳ ಮಹತ್ವ ಏನು ಎನ್ನುವುದು ಇದರಿಂದ ಸಾಬೀತಾಗಿದೆ. ಕ್ರಿಕೆಟ್‌ನಲ್ಲಿ ಅವಕಾಶಗಳು ಸಿಗದೆ ಹತಾಶೆಗೊಂಡಿದ್ದ ಕರುಣ್ ನಾಯರ್ ಮೂರು ವರ್ಷಗಳ ಹಿಂದೆ 'ಡಿಯರ್ ಕ್ರಿಕೆಟ್, ಗಿವ್ ಮಿ ಒನ್ ಮೋರ್ ಛಾನ್ಸ್'... ಎಂದು ಟ್ವೀಟ್ ಮಾಡಿದ್ದರು. ಇದು ಭಾರಿ ಚರ್ಚೆಗೂ ಕಾರಣವಾಗಿತ್ತು. ಅವರ ಮನದಾಸೆಯಂತೆ ಈಗ ರಾಷ್ಟ್ರೀಯ ತಂಡದಲ್ಲಿ ಅವಕಾಶ ಸಿಕ್ಕಿದೆ. ಬಳಸಿಕೊಳ್ಳುವ ಛಾತಿ ಬೇಕಷ್ಟೆ.

ಪ್ರತಿಕ್ರಿಯಿಸಿ: feedback@sudha.co.in

